# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕನಕಪುರ

## ಸಿ.ಸಿ.ನಂ.1429/2017

## :: ದೋಷಾರೋಪಣೆ ::

**ಶ್ರೀ. ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ**

1. ಹನುಮಂತರಾಜು
ಬಿನ್ ಲೇಟ್ ಹನುಮಂತಯ್ಯ ಉಃ ತೊಟಿ ಹನುಮಂತಯ್ಯ
ವಯಸ್ಸು ೨೯ ವರ್ಷಗಳು
ವಾಸಃ ಅಲೂರು ಗ್ರಾಮ
ಬಸವನಪುರ ಹೋಬಳಿ
ನೆಲಮಂಗಲ ತಾಲ್ಲೂಕು

ಖಾಯಂ ವಿಳಾಸಃ-
ಮೇಳೆಕೋಟೆ, ಕನಕಪುರ ಟೌನ್,
ಕನಕಪುರ ತಾಲ್ಲೂಕು
ರಾಮನಗರ ಜಿಲ್ಲೆ.

**ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :-**

ಮೊದಲನೇಯದಾಗಿ :- ದಿನಾಂಕ.**05.07.2016** ರಂದು ರಾತ್ರಿ ಸುಮಾರು **1:30** ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಟೌನಿನ ಜನತಾ ಕಾಲೋನಿ ಮೇಗಳಬೀದಿಯಲ್ಲಿ ವಾಸವಾಗಿರುವ ಚಾಸಾ-೧ ರಾಜು ರವರ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಆರೋಪಿಯಾದ ನೀವು ರಾತ್ರಿ ವೇಳೆ ಮನೆ ಕಳ್ಳತನ ಮಾಡುವ ಉದ್ದೇಶದಿಂದ ಒಡೆದು ಮನೆಗೆ ಅತಿಕ್ರಮ ಪ್ರವೇಶ ಮಾಡಿ ಕಾರವಾಸದಿಂದ ದಂಡನೀಯವಾದ ಕಳುವಿನ ಅಪರಾಧ ಮಾಡುವ ಉದ್ದೇಶದಿಂದ ಮನೆಯ ಬಾಗಿಲನ್ನು ಒಡೆದು ಕನ್ನ ಹಾಕಿ ಸುಮಾರು ೧ ಲಕ್ಷ ರೂ ಮೌಲ್ಯದ ಬೆಲೆ ಬಾಳುವ ಚಿನ್ನ ಮತ್ತು

ಒಡವೆಗಳಾದ ೭.೪೦೦ ಗ್ರಾಂ ತೂಕದ ಎರಡು ದೊಡ್ಡ ಚಿನ್ನದ ಉಂಗುರ, ೦.೯೦೦ ಗ್ರಾಂ ತೂಕದ ೨ ಚಿಕ್ಕ ಉಂಗುರ, ೨೦ ಗ್ರಾಂ ತೂಕದ ಚಿನ್ನದ ಕತ್ತಿನ ಚೈನು, ೪.೨೦೦ ಗ್ರಾಂ ತೂಕದ ಒಂದು ಜೊತೆ ಫ್ಯಾನ್ಸಿ ಟಾಪ್ಸ್, ೧.೧೦೦ ಗ್ರಾಂ ತೂಕದ ಒಂದು ಚಿಕ್ಕ ಉಂಗುರ, ೨.೪೦೦ ಗ್ರಾಂ ತೂಕದ ಒಂದು ಜೊತೆ ಗುಂಡು ಮತ್ತು ಡ್ರಾಪ್ಸ್ ಹಾಗೂ ೫೧ ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ಬಟ್ಟಲುಗಳು, ೨೨ ಗ್ರಾಂ ತೂಾಕದ ೩ ಬೆಳ್ಳಿ ಕಾಸುಗಳು, ೨೭ ಗ್ರಾಂ ತೂಕದ ೨ ಜೊತೆ ಕಾಲುಚೈನು ಮತ್ತು ೨೬ ಗ್ರಾಂ ತೂಕದ ಒಂದು ಬೆಳ್ಳಿ ಬ್ರೇಸ್ ಲೈಟ್ ಇವುಗಳನ್ನು ಕಳ್ಳತನ ಮಾಡಿ ಅಪರಾಧ ಮಾಡುವ ಮೂಲಕ ಭಾರತೀಯ ದಂತ ಸಂಹಿತೆ ಕಲಂ ೪೫೭ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ:- ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-೧ ರವರ ಮನೆಯ ಒಳಗಡೆ ಬೀರುವಿನಲ್ಲಿದ್ದ ಸುಮಾರು ೧ ಲಕ್ಷ ರೂ ಮೌಲ್ಯದ ಬೆಲೆ ಬಾಳುವ ಚಿನ್ನ ಮತ್ತು ಒಡವೆಗಳಾದ ೭.೪೦೦ ಗ್ರಾಂ ತೂಕದ ಎರಡು ದೊಡ್ಡ ಚಿನ್ನದ ಉಂಗುರ, ೦.೯೦೦ ಗ್ರಾಂ ತೂಕದ ೨ ಚಿಕ್ಕ ಉಂಗುರ, ೨೦ ಗ್ರಾಂ ತೂಕದ ಚಿನ್ನದ ಕತ್ತಿನ ಚೈನು, ೪.೨೦೦ ಗ್ರಾಂ ತೂಕದ ಒಂದು ಜೊತೆ ಫ್ಯಾನ್ಸಿ ಟಾಪ್ಸ್, ೧.೧೦೦ ಗ್ರಾಂ ತೂಕದ ಒಂದು ಚಿಕ್ಕ ಉಂಗುರ, ೨.೪೦೦ ಗ್ರಾಂ ತೂಕದ ಒಂದು ಜೊತೆ ಗುಂಡು ಮತ್ತು ಡ್ರಾಪ್ಸ್ ಹಾಗೂ ೫೧ ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ಬಟ್ಟಲುಗಳು, ೨೨ ಗ್ರಾಂ ತೂಾಕದ ೩ ಬೆಳ್ಳಿ ಕಾಸುಗಳು, ೨೭ ಗ್ರಾಂ ತೂಕದ ೨ ಜೊತೆ ಕಾಲುಚೈನು ಮತ್ತು ೨೬ ಗ್ರಾಂ ತೂಕದ ಒಂದು ಬೆಳ್ಳಿ ಬ್ರೇಸ್ ಲೈಟ್ ಇವುಗಳನ್ನು ಕಳ್ಳತನ ಮಾಡುವ ಮೂಲಕ ಭಾರತೀಯ ದಂತ ಸಂಹಿತೆ ಕಲಂ ೩೮೦ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

**ಮೇಲಿನ ದೋಷರೋಪಣೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಕನಕಪುರ**

**<u>ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ಯವರ ನ್ಯಾಯಾಲಯ, ಕನಕಪುರ.</u>**

**<u>ಸಿ.ಸಿ. ನಂ.1429/2017</u>**

ಹಾರೋಹಳ್ಳಿ ಪೊಲೀಸ್ ಠಾಣೆ ವಿರುದ್ದ

ಹನುಮಂತರಾಜು
ಬಿನ್ ಲೇಟ್ ಹನುಮಂತಯ್ಯ
ಉಃ ತೊಟಿ ಹನುಮಂತಯ್ಯ
ವಯಸ್ಸು **೨೯** ವರ್ಷಗಳು
ವಾಸಃ ಅಲೂರು ಗ್ರಾಮ
ಬಸವನಪುರ ಹೋಬಳಿ
ನೆಲಮಂಗಲ ತಾಲ್ಲೂಕು

**:: <u>ಆಪಾದನೆ</u> ::**

ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ**?**

ಉಃ

ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ**?**

ಉಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ, ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

ಆರೋಪಿತರ ಸಹಿ